ಕರ್ನಾಟಕ ಸರ್ಕಾರ

## ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ನಂ.17, ವಾರ್ತಾ ಸೌಧ, ಭಗವಾನ್ ಮಹಾವೀರ ರಸ್ತೆ ಬೆಂಗಳೂರು 560 001.
ದೂ. 080-22028032/34/ಫ್ಯಾಕ್ಸ್ 22028041

ದಿನಾಂಕ : 03-03-2015

## ಪತ್ರಿಕಾ ಆಮಂತ್ರಣ

| ಕ್ರಮ ಸಂಖ್ಯೆ | ಕಾರ್ಯಕ್ರಮಗಳ ವಿವರ | ದಿನಾಂಕ ಸಮಯ | ಕಾರ್ಯಕ್ರಮ ನಡೆಯುವ ಸ್ಥಳ |
|---|---|---|---|
| 1. | ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯಿಂದ ಡೋಪಿಂಗ್ ವಿರುದ್ಧ ಜಾಗೃತಿ ಕಾರ್ಯಾಗಾರ: | 04-03-2015 ಬುಧವಾರ ಬೆಳಿಗ್ಗೆ 9-30 ಗಂಟೆಗೆ | ಯವನಿಕಾ ಸಭಾಂಗಣ, ರಾಜ್ಯ ಯುವ ಕೇಂದ್ರ, ನೃಪತುಂಗ ರಸ್ತೆ, ಬೆಂಗಳೂರು – 560 001 |

ನಿರ್ದೇಶಕರ ಪರವಾಗಿ

## ಪತ್ರಿಕಾ ಪ್ರಕಟಣೆ

# ಸಾಹಸ ಶಿಕ್ಷಣ, ವ್ಯಕ್ತಿತ್ವ ವಿಕಸನ ಶಿಬಿರ

**ಬೆಂಗಳೂರು, ಮಾರ್ಚ್ 3 (ಕರ್ನಾಟಕ ವಾರ್ತೆ)**

ಲಾಲ್ ಬಹದ್ದೂರ್ ಮೌಂಟನೇರಿಂಗ್ ಇನ್ಸ್‌ಟ್ಯೂಟ್‌ವತಿಯಿಂದ ಸಾಹಸ ಶಿಕ್ಷಣ, ಶಿಬಿರ ಹಾಗೂ ವ್ಯಕ್ತಿ ವಿಕಸನ ಶಿಬಿರವನ್ನು ವಿದ್ಯಾರ್ಥಿಗಳಿಗೆ ಮೇ 1 ರಿಂದ 5 ರವರೆಗೆ ಆಯೋಜಿಸಲಾಗಿದೆ. ವಯೋಮಿತಿ 12 ವರ್ಷದಿಂದ 16 ವರ್ಷದ ಎಲ್ಲಾ ವಿದ್ಯಾರ್ಥಿಗಳು ಭಾಗವಹಿಸಲು ಅರ್ಹರಾಗಿರುತ್ತಾರೆ. ಅಲ್ಲದೆ ಶಾಲೆಯಲ್ಲಿ ನೊಂದಾಯಿಸಿರುವ ಸ್ಕೌಟ್ಸ್ ಮತ್ತು ಗೈಡ್ಸ್ ಎನ್.ಸಿ.ಸಿ, ಭಾರತ್ ಸೇವಾದಳ ಇಕೋ ಕ್ಲಬ್ ಹಾಗೂ ಶಾಲಾ ವಿದ್ಯಾರ್ಥಿಗಳಿಗೂ ಭಾಗವಹಿಸಲು ಅನುಮತಿ ನೀಡಲಾಗಿದೆ.

ಶಿಬಿರವಾಸ /ಸಹಬಾಳ್ವೆ / ಭಾವೈಕ್ಯತೆ / ನಕ್ಷೆ ಬಿಡಿಸುವುದು / ಏರೋಬಿಕ್ಸ್ / ಪಾಕಶಾಸ್ತ್ರ / ಜಾಡು ಹಿಡಿ / ಚಾರಣ / ರಾಷ್ಟ್ರೀಯ ಭಾವೈಕ್ಯತೆ /ಯೋಗಾಸನ / ಪ್ರಥಮ ಚಿಕಿತ್ಸ್ ಮತ್ತು ಧ್ಯಾನ, ಇದರ ಜೊತೆ ಜೊತೆಗೆ ಸಾಹಸ ಚಟುವಟಿಕೆಗೆ ಪೂರಕವಾದ ಮನರಂಜನಾ ಕ್ರೀಡೆ ಶಿಬಿರಾಗ್ನಿ ಮತ್ತು ನಕ್ಷತ್ರ ವೀಕ್ಷಣೆ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ.

ಈ ಶಿಬಿರದಲ್ಲಿ ಪಾಲ್ಗೊಳ್ಳಲು ಆಸಕ್ತರು ತಮ್ಮ ಹೆಸರನ್ನು ನೊಂದಾಯಿಸಿಕೊಳ್ಳಲು ಮಾರ್ಚ್ 08 ಮತ್ತು 09 ರಂದು ಸಂಜೆ 6 ಗಂಟೆಯೊಳಗೆ ಈ ಎರಡು ದಿನಗಳಲ್ಲಿ ಹೆಸರನ್ನು ರೂಂ. ನಂ 27, ಕಂಠೀರವ ಸ್ಟೇಡಿಯಂ, ಗೇಟ್ ನಂ. 11, ಕಸ್ತೂರಿ ಬಾ ರಸ್ತೆ, ಬೆಂಗಳೂರು – 560 001 ನೊಂದಾಯಿಸಿಕೊಳ್ಳಲು ಅವಕಾಶವಿದ್ದು, ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ 9341822000 ಮೂಲಕ ಸಂಪರ್ಕಿಸಬಹುದಾಗಿದೆ.

ಮೊದಲು ಬಂದವರಿಗೆ ಮೊದಲ ಆದ್ಯತೆ ನೀಡಲಾಗುವುದು. ಗ್ರಾಮೀಣ ವಿಭಾಗದ ವಿದ್ಯಾರ್ಥಿಗಳಿಗೂ ಪ್ರಾಶಸ್ತ್ಯ ನೀಡಲಾಗುವುದು ಎಂದು ಲಾಲ್ ಬಹದ್ದೂರ್ ಮೌಂಟನೇರಿಂಗ್ ಇನ್ಸ್ಟ್ಯೂಟ್ ಪ್ರಕಟಣೆ ತಿಳಿಸಿದೆ.

ಬಾಬು:ಜಿಪಿಆರ್.

# ಫಲಿತಾಂಶ ಪ್ರಕಟ

**ಬೆಂಗಳೂರು, ಮಾರ್ಚ್ 3 (ಕರ್ನಾಟಕ ವಾರ್ತೆ)**

ಜಿಲ್ಲಾ ನ್ಯಾಯಾಧೀಶರುಗಳ ನೇರ ನೇಮಕಾತಿಗಾಗಿ 2014 ರ ಅಕ್ಟೋಬರ್ 11 ರಂದು ನಡೆದ ಲಿಖಿತ ಪರೀಕ್ಷೆಗಳ ಫಲಿತಾಂಶವನ್ನು ರಾಜ್ಯ ಉಚ್ಛ ನ್ಯಾಯಾಲಯದ ಅಂತರ್ಜಾಲದಲ್ಲಿ ದಿನಾಂಕ 21-2-2015 ರಂದು ಪ್ರಕಟಿಸಲಾಗಿದೆ.

ಪರೀಕ್ಷೆಗೆ ಹಾಜರಾಗಿದ್ದ ಅಭ್ಯರ್ಥಿಗಳು ತಮ್ಮ ಫಲಿತಾಂಶ ತಿಳಿಯಲು ಉಚ್ಛ ನ್ಯಾಯಾಲಯದ ಅಂತರ್ಜಾಲ www.karnataka judiciary.kar.nic.in ಅನ್ನು ವೀಕ್ಷಿಸಬಹುದಾಗಿದೆ.

ಬಾಬು:ಜಿಪಿಆರ್.

# RESULTS ANNOUNCED

Bangalore, March 3 (Karnataka Information)

The result of the written examination held on 11th October, 2014 for the post of District Judges by Direct Recruitment has been published in the Official web-site of the High Court of Karnataka on 21-02-2015.

The candidates who appeared for the said examination may know their results by visiting at www.karnatakajudiciary.kar.nic.in

babu/gpr.

## ಶಾಂತಲಾ ನಾಟ್ಯ ಪ್ರಶಸ್ತಿ ಆಯ್ಕೆ ಸಮಿತಿಗೆ ಸದಸ್ಯರ ನೇಮಕ

**ಬೆಂಗಳೂರು, ಮಾರ್ಚ್ 3 (ಕರ್ನಾಟಕ ವಾರ್ತೆ)**

**ತುಮಕೂರಿನ ಶ್ರೀ ಕೆ. ಎಂ. ರಾಮನ್ ಅವರನ್ನು 2014 ನೇ ಸಾಲಿನ ಶಾಂತಲಾ ನಾಟ್ಯ ಪ್ರಶಸ್ತಿ ಆಯ್ಕೆ ಸಮಿತಿಗೆ ಸದಸ್ಯರನ್ನಾಗಿ ರಾಜ್ಯ ಸರ್ಕಾರ ನೇಮಿಸಿದೆ.**
**ಬಾಬು:ಸೌಮ್ಯ:ಜಿಪಿಆರ್.**

## ವೈದ್ಯಕೀಯ ತಪಾಸಣೆ

**ಬೆಂಗಳೂರು, ಮಾರ್ಚ್ 3 (ಕರ್ನಾಟಕ ವಾರ್ತೆ)**

**ಕರ್ನಾಟಕ ಲೋಕಸೇವಾ ಆಯೋಗವು ಗೆಜೆಟೆಡ್ ಪ್ರೊಬೆಷನರ್ಸ್ 2014 ನೇ ಸಾಲಿನ ಗ್ರೂಪ್ 'ಎ' ಮತ್ತು 'ಬಿ' ವೃಂದದ 440 ಹುದ್ದೆಗಳನ್ನು ಭರ್ತಿಮಾಡಲು ಪೂರ್ವಭಾವಿ ಪರೀಕ್ಷೆಯ ಅರ್ಜಿಯಲ್ಲಿ ಅಂಧ/ದೃಷ್ಟಿಮಾಂದ್ಯ ಮೀಸಲಾತಿ ಕೋರಿರುವ ಅಭ್ಯರ್ಥಿಗಳಿಗೆ ದಿನಾಂಕ 9–3–2015 ರಿಂದ 13–3–2015 ರವರೆಗೆ ಮಿಂಟೋ ಕಣ್ಣು ಆಸ್ಪತ್ರೆ, ಚಾಮರಾಜಪೇಟೆ, ಬೆಂಗಳೂರು – 560 002 ಇಲ್ಲಿ ವೈದ್ಯಕೀಯ ತಪಾಸಣೆಯನ್ನು ನಡೆಸಲಾಗುತ್ತಿದೆ. ಈಗಾಗಲೇ ವೈದ್ಯಕೀಯ ತಪಾಸಣೆಯ ಸೂಚನಾ ಪತ್ರಗಳನ್ನು ಅಭ್ಯರ್ಥಿಗಳಿಗೆ ರವಾನಿಸಲಾಗಿದ್ದು, ದಿನಾಂಕ 7–3–2015 ರ ಒಳಗಾಗಿ ಸೂಚನಾ ಪತ್ರ ತಲುಪದ ಅಭ್ಯರ್ಥಿಗಳು ಕರ್ನಾಟಕ ಲೋಕಸೇವಾ ಆಯೋಗವನ್ನು ಸಂಪರ್ಕಿಸಬಹುದಾಗಿದೆ.**

**ಬಾಬು:ಜಿಪಿಆರ್.**